# ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–01.

ಸಂಖ್ಯೆ: ಇ(2) 898/2012–13/ಪಿಎಸ್‌ಸಿ ದಿನಾಂಕ: 07–12–2012.

## ಅಧಿಸೂಚನೆ

1. ಕರ್ನಾಟಕ ರಾಜ್ಯದ ಅಬಕಾರಿ ಇಲಾಖೆಯಲ್ಲಿನ 200 ಅಬಕಾರಿ ಉಪನಿರೀಕ್ಷಕ ಮತ್ತು 332 ಅಬಕಾರಿ ರಕ್ಷಕ (ಪುರುಷ) ಹಾಗೂ 18 ಅಬಕಾರಿ ರಕ್ಷಕ (ಮಹಿಳೆ) ಹುದ್ದೆಗಳನ್ನು, ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ತಿದ್ದುಪಡಿ ನಿಯಮ 2009 ಅನ್ವಯ ಭರ್ತಿಮಾಡಲು ON-LINE ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

**ಈ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ದಿನಾಂಕವನ್ನು ತದನಂತರ ಪ್ರಕಟಿಸಲಾಗುವುದು.**

ಅರ್ಜಿಗಳನ್ನು ಆನ್–ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

2. **ಪರೀಕ್ಷಾ ಶುಲ್ಕ:–**

| | |
|---|---|
| ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | **₹ 300/–** |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | **₹ 25/–** |

1) **ನಿಗದಿತ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದಾದರೂ ಶಾಖೆಗಳಲ್ಲಿ ಬ್ಯಾಂಕಿನ ವೇಳೆಯಲ್ಲಿ ಚಲನ್ ನೀಡಿ ಹಣ ಪಾವತಿಸಬಹುದು.**
2) **ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಅರ್ಜಿ ಭರ್ತಿ ಮಾಡಲು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.**
3) **ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.**

3. **ಅಭ್ಯರ್ಥಿಗಳು ವಿದ್ಯುನ್ಮಾನ ಮಾರ್ಗ (On-line) ಮೂಲಕ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಸಂದಾಯ ಮಾಡುವ ವಿಧಾನಗಳು:–**

**ಹಂತ 1:–** ಅಭ್ಯರ್ಥಿಗಳು ಆಯೋಗದ ಅಧಿಕೃತ ವೈಬ್‌ಸೈಟ್ "**http://kpsc.kar.nic.in**"ನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ '**Application For the post of**

1. **Sub-Inspector of Excise**
2. **Excise Guard (Men)**
3. **Excise Guard (Women)**

ಎಂದು ಮೂಡುತ್ತದೆ ಮತ್ತು ಅಧಿಸೂಚನೆ ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳು/ಪರೀಕ್ಷಾ ಶುಲ್ಕ/ಬ್ಯಾಂಕಿನ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿಮಾಡತಕ್ಕದ್ದು.

**ಹಂತ 2:–** ಅರ್ಜಿಯನ್ನು ಭರ್ತಿಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚೆಗಿನ ಭಾವಚಿತ್ರವನ್ನು ಒಂದು ಸ್ವಚ್ಛವಾದ ಬಿಳಿಯ ಹಾಳೆಯ ಮೇಲೆ ಲಗತ್ತಿಸಿ ಅದರ ಕೆಳಗೆ ಕಪ್ಪು ಶಾಯಿಯ ಸ್ಕೆಚ್/ಮಾರ್ಕರ್ ಪೆನ್ನಿನಿಂದ ಸಹಿಯನ್ನು ಮಾಡಿ (ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು) ನಂತರ ಭಾವಚಿತ್ರ (**Photo**) ಮತ್ತು ಸಹಿಯನ್ನು ಒಳಗೊಂಡಂತೆ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು.

| | |
|---|---|
| o ಫೈಲ್ ಅಳತೆ<100 ಕೆಬಿ | **ಪಾಸ್ ಪೋರ್ಟ್ ಭಾವಚಿತ್ರದ ಅಳತೆಗಳು:**<br>45 ಎಂ.ಎಂ (ಉದ್ದ) X 35 ಎಂ.ಎಂ (ಅಗಲ)<br><br>**ಸಹಿ ಅಳತೆ:**<br>20ಎಂ.ಎಂ (ಉದ್ದ) X 35 ಎಂ.ಎಂ (ಅಗಲ) |
| o ಡಿಪಿಐ ಹಿನ್ನೆಲೆ=100 ಡಿಪಿಐ | |
| o ಇಮೇಜ್ ಅಳತೆ=100% | |
| o ಕಲರ್ | |
| o ಜೆಪಿಇಜಿ (**jpeg**) | |

**ಹಂತ 3:–** ಅಭ್ಯರ್ಥಿಯು ತಾನು ಅರ್ಜಿ ಸಲ್ಲಿಸಲು ಬಯಸುವ ಹುದ್ದೆಯ ಮೇಲೆ ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿಮಾಡತಕ್ಕದ್ದು. ಅರ್ಜಿಯನ್ನು ಭರ್ತಿಮಾಡಿದ ನಂತರ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು **Edit** ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು.

**ಹಂತ 4:–** ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಮನದಟ್ಟು ಮಾಡಿಕೊಂಡು ನಂತರ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ (**Photo**)ವನ್ನು **upload** ಮಾಡತಕ್ಕದ್ದು. **Photo upload** ಮಾಡಿದ ನಂತರ

ಅರ್ಜಿಯಲ್ಲಿನ ವಿವರಗಳು ಸರಿಯಾಗಿರುತ್ತವೆಯೆಂದು ಒಪ್ಪಿರುತ್ತೇನೆ **(I agree)** ಎಂಬ ಘೋಷಣೆಯ ಮೇಲೆ ಕ್ಲಿಕ್ ಮಾಡತಕ್ಕದ್ದು, ಅನಂತರವೇ **Generate Challan** ಮತ್ತು **Application Preview** ಮೂಡಲಿದ್ದು, ಎರಡನ್ನೂ **Download** ಮಾಡಿ ಕೊಳ್ಳತಕ್ಕದ್ದು. ಮತ್ತು ಅರ್ಜಿಯ ಪ್ರತಿಯನ್ನು ಮತ್ತು ಶುಲ್ಕ ಸಂದಾಯ ಮಾಡಿದ ಚಲನ್‌ಅನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಚಲನ್ ಅನ್ನು ಹಾಜರುಪಡಿಸಬೇಕು.

**<u>ಹಂತ 5:–</u>** **Download** ಮಾಡಿಕೊಳ್ಳಲಾದ **Challan** ನಲ್ಲಿರುವ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಚಲನ್ ನೀಡಿ ಹಣ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಸಿಂಡಿಕೇಟ್ ಬ್ಯಾಂಕ್ ಅನ್ನು ಹೊರತುಪಡಿಸಿ ಇತರೆ ಯಾವುದೇ ಬ್ಯಾಂಕಿನಲ್ಲಿ ಶುಲ್ಕ ಸಂದಾಯ ಮಾಡುವಂತಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.

**3.1** ಅಭ್ಯರ್ಥಿಗಳು ತಮ್ಮ ಅರ್ಜಿಯ ಸ್ಥಿತಿಯನ್ನು ತಿಳಿಯಬೇಕಾದಲ್ಲಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಐದು ದಿನಗಳ ತರುವಾಯು, ಆಯೋಗದ ವೆಬ್‌ಸೈಟ್‌ನ **Check Status** ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ, ಅರ್ಜಿಯು ಸಿಂಧುವಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

**3.2 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಹಾಗೂ ನಿಗದಿತ ಶುಲ್ಕ ಪಾವತಿಸತಕ್ಕದ್ದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.**

➡ **<u>ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10–12–2012.</u>**

➡ **<u>ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09 –01–2013.</u>**

➡ **<u>ಪರೀಕ್ಷಾ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 11–01–2013.</u>**

**<u>ವಿಶೇಷ ಸೂಚನೆ:</u> On-line ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 9740977411 ಮತ್ತು 9741966115 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.**

## 4. <u>ಅರ್ಹತಾ ಷರತ್ತುಗಳು:</u>

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

## 5. <u>ಶೈಕ್ಷಣಿಕ ವಿದ್ಯಾರ್ಹತೆ:–</u>

**ಅ) <u>ಅಬಕಾರಿ ಉಪ ನಿರೀಕ್ಷಕರು</u>**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಯವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

**ಆ) <u>ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ)</u>**

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.

**<u>ಸೂಚನೆ:–</u> ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.**

## 6. <u>ಹುದ್ದೆಗಳ ವರ್ಗೀಕರಣ:–</u>

**(ಅ) <u>ಅಬಕಾರಿ ಉಪನಿರೀಕ್ಷಕರು–200 ಹುದ್ದೆಗಳು:</u>**

ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ–1ರಲ್ಲಿ ತೋರಿಸಿದೆ.

**ಆ) ಅಬಕಾರಿ ರಕ್ಷಕರು (ಪುರುಷ) –332 ಹುದ್ದೆಗಳು:**
ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ–2ರಲ್ಲಿ ತೋರಿಸಿದೆ.

**ಇ) ಅಬಕಾರಿ ರಕ್ಷಕರು (ಮಹಿಳೆ) –18 ಹುದ್ದೆಗಳು:**
ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ–3ರಲ್ಲಿ ತೋರಿಸಿದೆ.

ಈ ಮೇಲೆ ತೋರಿಸಿರುವ ಹುದ್ದೆಗಳ ಸಂಖ್ಯೆ ಮತ್ತು ಅವುಗಳ ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

**ಈ ಮೇಲಿನ ಹುದ್ದೆಗಳಿಗೆ ಕನಿಷ್ಠ ದೇಹದಾರ್ಢ್ಯತೆ ಮತ್ತು ದೈಹಿಕ ಅರ್ಹತಾ ಪರೀಕ್ಷೆಯನ್ನು ನಿಗದಿಪಡಿಸಿರುವುದರಿಂದ, ಈ ಹುದ್ದೆಗಳ ವರ್ಗೀಕರಣದಲ್ಲಿ ಅಂಗವಿಕಲರಿಗೆ ಹುದ್ದೆಗಳನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳ ನೇಮಕಾತಿಗೆ ಅರ್ಹರಾಗುವುದಿಲ್ಲ.**

**7. ವೇತನ ಶ್ರೇಣಿ :–**

**ಅ) ಅಬಕಾರಿ ಉಪ ನಿರೀಕ್ಷಕರು:–**
₹ 16000–400–17200–450–1900–500–21000–600–24600–700–28800–800–29600

**ಆ) ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು (ಮಹಿಳೆ):–**
₹ 11600–200–12000–250–13000–300–14200–350–15600–400–17200–450–19000–500–21000

**ಪಿಂಚಣಿ ಸೌಲಭ್ಯ:** ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006ರಂತೆ.

**8. ವಯೋಮಿತಿ:–**ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 21 ವರ್ಷ ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯನ್ನು ಈ ಕೆಳಕಂಡಂತೆ ಮೀರಿರಬಾರದು.

| | | |
|---|---|---|
| **ಸಾಮಾನ್ಯ ವರ್ಗ** | 26 ವರ್ಷಗಳು | |
| **ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳು** | 28 ವರ್ಷಗಳು | |
| **ಮಾಜಿ ಸೈನಿಕರು** | **ಅಬಕಾರಿ ಉಪನಿರೀಕ್ಷಕರು** | ಸೈನಿಕರಾಗಿ ಸಲ್ಲಿಸಿರುವ ಸೇವೆಯನ್ನು ಸಡಿಲಿಸಿದ ವರ್ಷಗಳು ಅಥವಾ 38 ವರ್ಷಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು |
| | **ಅಬಕಾರಿ ರಕ್ಷಕ(ಪುರುಷ) ಮತ್ತು ಅಬಕಾರಿ ರಕ್ಷಕ(ಮಹಿಳೆ)** | ಮಾಜಿ ಸೈನಿಕರಾಗಿದ್ದು ಅವರು ನಿವೃತ್ತಿ ಅಥವಾ ಕಡಿತ ಗೊಳಿಸಿದ ಕಾರಣದ ಮೇರೆಗೆ ಸೇನೆಯಿಂದ ಬಿಡುಗಡೆ ಹೊಂದಿದಲ್ಲಿ ಅಲ್ಲಿ ಅವರು ಸಲ್ಲಿಸಿರುವ ಸೇವೆಯಷ್ಟು ವರ್ಷಗಳಿಗೆ ವಯೋಮಿತಿ ರಿಯಾಯಿತಿ ನೀಡಲಾಗುವುದು. |

**ಸೂಚನೆ:–** **ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಈ ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ಅನ್ವಯವಾಗುವುದಿಲ್ಲ ಆದಾಗ್ಯೂ ಅವರು ನಿಗದಿತ ವಯೋಮಿತಿಯಲ್ಲಿದ್ದಲ್ಲಿ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು ಇಟ್ಟುಕೊಂಡಿರತಕ್ಕದ್ದು.**

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉತ್ತೀರ್ಣರಾದ ನಂತರ ನೀಡಲಾಗುವ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ)/ಕ್ಯುಮುಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವಂತೆ ಜನ್ಮ ದಿನಾಂಕವನ್ನು ಆಯೋಗವು ಪರಿಗಣಿಸುವುದು. ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

**9. ಮಾಜಿ ಸೈನಿಕರ ವಿವರಣೆ:–**

(ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತಿ, ಅಂದರೆ ಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ: ಮತ್ತು (ಬಿ) ಕೇಂದ್ರ ಸಶಸ್ತ್ರದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ

ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಅಂತಹ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

**ಅಥವಾ**

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

**ಅಥವಾ**

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇನೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

**ಅಥವಾ**

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರ ಪ್ರಶಸ್ತಿ ವಿಜೇತರು

**ವಿವರಣೆ:** ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

**10. ಶಾರೀರಿಕ ದಾರ್ಢ್ಯತೆ:–**

**ಅಬಕಾರಿ ಉಪನಿರೀಕ್ಷಕರು, ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ).**

**(ಅ) ಶಾರೀರಿಕ ದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು:–**

| | ಪುರುಷ ಅಭ್ಯರ್ಥಿಗಳಿಗೆ | ಮಹಿಳಾ ಅಭ್ಯರ್ಥಿಗಳಿಗೆ |
|---|---|---|
| (ಎ) ಎತ್ತರ | 163 ಸೆ. ಮೀ | 157 ಸೆ.ಮೀ. |
| (ಬಿ) ತೂಕ | -- | 49.9 ಕಿ.ಗ್ರಾಂ. |
| (ಸಿ) ಎದೆಯ ಅಳತೆ:– | ಎದೆಯ ಸುತ್ತಳತೆ 81 ಸೆ.ಮೀ.ಗಿಂತ ಕಡಿಮೆ ಇರಬಾರದು. ಪೂರ್ಣ ಉಸಿರು ಎಳೆದಾಗ 5 ಸೆ.ಮೀ.ಹೆಚ್ಚಳವಾಗಬೇಕು. | ಇದು ಮಹಿಳಾ ಅಭ್ಯರ್ಥಿಗಳಿಗೆ ಅನ್ವಯವಾಗುವುದಿಲ್ಲ. |

**(ಆ) ದೃಷ್ಟಿ ಸಾಮರ್ಥ್ಯ:–**

| ದೂರದ ದೃಷ್ಟಿ | | ಹತ್ತಿರದ ದೃಷ್ಟಿ | |
|---|---|---|---|
| ದೋಷ ರಹಿತ ದೃಷ್ಟಿ | ದೋಷಪೂರಿತ ದೃಷ್ಟಿ | ದೋಷ ರಹಿತ ದೃಷ್ಟಿ | ದೋಷಪೂರಿತ ದೃಷ್ಟಿ |
| 6/9 | 6/9 | 0/6 | 0/8 |
| ಅಥವಾ | | | |
| 6/9 | 6/12 | | |

ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳೆಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

10.1

**ಟಿಪ್ಪಣಿ:–** ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಪರೀಕ್ಷಾ ದಿನದಂದೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅಭ್ಯರ್ಥಿಯ ಹೆಸರು, ವಿಳಾಸ, ನೋಂದಣಿ ಸಂಖ್ಯೆ, ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

**11. ನೇಮಕಾತಿ ವಿಧಾನ:**

ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ಅದರ ತಿದ್ದುಪಡಿ ನಿಯಮಗಳು–2009ರವರೆಗಿನ (ತಿದ್ದುಪಡಿ) ನಿಯಮಗಳಲ್ಲಿ ನಿರ್ದಿಷ್ಟ ಪಡಿಸಿರುವಂತೆ ಅಬಕಾರಿ ಉಪ ನಿರೀಕ್ಷಕರ ಮತ್ತು ಅಬಕಾರಿ ರಕ್ಷಕರು (ಪುರುಷ) ಹಾಗೂ ಅಬಕಾರಿ ರಕ್ಷಕರು (ಮಹಿಳೆ) ಹುದ್ದೆಗಳಿಗೆ ಆಯೋಗವು ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಅಂಕಗಳ ಆಧಾರದ ಮೇಲೆ ಮೀಸಲಾತಿ ನಿಯಮಗಳನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ದೇಹ ದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯದ ಪರೀಕ್ಷೆಗೆ ಕರೆಯಲಾಗುವುದು.

**ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳ ಆಯ್ಕೆಪಟ್ಟಿ:** ದೈಹಿಕ ಸಾಮರ್ಥ್ಯದ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುವುದು.

**ಅಬಕಾರಿ ರಕ್ಷಕರ ಹುದ್ದೆಗಳ ಆಯ್ಕೆಪಟ್ಟಿ:** ದೈಹಿಕ ಸಾಮರ್ಥ್ಯದ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮತ್ತು ಅಭ್ಯರ್ಥಿಗಳಿಂದ ಪಡೆಯಲಾದ ಜಿಲ್ಲಾವಾರು ಆದ್ಯತೆಯನ್ನು ಆಧರಿಸಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ.

**ವಿಶೇಷ ಸೂಚನೆ: ಈ ಮೇಲ್ಕಂಡ ಹುದ್ದೆಗಳ ಆಯ್ಕೆಗೆ ಮೌಖಿಕ ಪರೀಕ್ಷೆ ಇರುವುದಿಲ್ಲ.**

12. **ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು/ ಮೈಸೂರು/ ಧಾರವಾಡ/ ಗುಲ್ಬರ್ಗಾ/ ಶಿವಮೊಗ್ಗ ಕೇಂದ್ರಗಳಲ್ಲಿ ಹಾಗೂ ಆಯೋಗವು ನಿಗದಿಪಡಿಸುವ ಇತರೆ ಯಾವುದೇ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ಕೇಂದ್ರವನ್ನು ನಮೂದಿಸತಕ್ಕದ್ದು. ಆದರೂ, ಜಿಲ್ಲಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸುವ ಸನ್ನಿವೇಶ ಎದುರಾದಲ್ಲಿ ಅರ್ಜಿಯಲ್ಲಿ ಅಭ್ಯರ್ಥಿಗಳು ನೀಡಿರುವ ವಿಳಾಸವನ್ನಾಧರಿಸಿ ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಪರೀಕ್ಷೆ ನಡೆಸಲಾಗುವುದು. ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ. ಪರೀಕ್ಷೆಗಳ ದಿನಾಂಕವನ್ನು ಮುಂದೆ ಜಾಹೀರಾತು ಪಡಿಸಲಾಗುವುದು ಹಾಗೂ ಆಯೋಗದ ವೆಬ್ ಸೈಟ್ "http://kpsc.kar.nic.in"** ನಲ್ಲಿ ಬಿತ್ತರಿಸಲಾಗುವುದು. ಪರೀಕ್ಷೆಗಳ ದಿನಾಂಕಗಳನ್ನು ಅಧಿಸೂಚಿಸಿದಾಗ ಪ್ರವೇಶ ಪತ್ರಗಳನ್ನು ಆಯೋಗದ ಅಂತರ್ಜಾಲದಿಂದ ಅಭ್ಯರ್ಥಿಗಳು ಡೌನ್ ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ.

**13. ಸ್ಪರ್ಧಾತ್ಮಕ ಪರೀಕ್ಷೆ:–**

**(ಅ) ಅಬಕಾರಿ ಉಪ ನಿರೀಕ್ಷಕರು:–**

ಈ ಹುದ್ದೆಗಳ ನೇಮಕಾತಿಯನ್ನು ಕೆಳಕಂಡ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಮಾಡಲಾಗುವುದು. ಈ ಸ್ಪರ್ಧಾತ್ಮಕ ಪರೀಕ್ಷೆಯು ಪದವಿ ಮಟ್ಟದ್ದಾಗಿದ್ದು, ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

- **ಪತ್ರಿಕೆ–1:–** ಇದರಲ್ಲಿ ಎರಡು ಭಾಗಗಳಿರುತ್ತವೆ.
  - **ಭಾಗ–1:–** ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆಯುವುದು. ಇದಕ್ಕೆ 30 ಅಂಕಗಳನ್ನು ನಿಗದಿಪಡಿಸಿರುತ್ತದೆ.
  - **ಭಾಗ–2:–** ಕನ್ನಡದಿಂದ ಆಂಗ್ಲ ಭಾಷೆಗೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸುವುದು. ಇದಕ್ಕೆ 20 ಅಂಕಗಳನ್ನು ನಿಗದಿಪಡಿಸಿರುತ್ತದೆ.

ಒಟ್ಟು 50 ಅಂಕಗಳ ಈ ಪತ್ರಿಕೆಯು **1½** ಗಂಟೆಗಳ ಕಾಲಾವಧಿ ಆಗಿರುತ್ತದೆ.

- **ಪತ್ರಿಕೆ–2:–**

**ಸಾಮಾನ್ಯ ಅಧ್ಯಯನ:–** ಇದರಲ್ಲಿ ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಮತ್ತು ಸಾಮಾನ್ಯ ಮಾನಸಿಕ ಸಾಮರ್ಥ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿದ್ದು, ಇದಕ್ಕೆ 150

ಅಂಕಗಳನ್ನು ನಿಗದಿಪಡಿಸಿರುತ್ತದೆ. ಈ ಪತ್ರಿಕೆಯು "ವಸ್ತುನಿಷ್ಠ ಬಹು ಆಯ್ಕೆ" (Objective Multiple Choice type) ಮಾದರಿಯದಾಗಿದ್ದು, ಒಟ್ಟು ಒಂದೂವರೆ ಗಂಟೆ ಅವಧಿಯದಾಗಿರುತ್ತದೆ. ಯಾವುದೇ ಪತ್ರಿಕೆಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಎರಡು ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

(ಆ) <u>ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ)</u>:–

➡ <u>ಸ್ಪರ್ಧಾತ್ಮಕ ಪರೀಕ್ಷೆ:–</u>

ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ಮತ್ತು ತಿದ್ದುಪಡಿ ಅಧಿಸೂಚನೆ ಗಳನ್ವಯ ನಡೆಸುವ ಈ ಪರೀಕ್ಷೆಯು ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪತ್ರಿಕೆಗಳನ್ನು ಹೊಂದಿರುತ್ತದೆ.

- **ಪ್ರಶ್ನೆ ಪತ್ರಿಕೆ– 1: ಸಾಮಾನ್ಯ ಜ್ಞಾನ : 150 ಅಂಕಗಳು– 2 ಗಂಟೆಗಳ ಅವಧಿ**
- **ಪ್ರಶ್ನೆ ಪತ್ರಿಕೆ– 2: ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್: 150 ಅಂಕಗಳು– 2 ಗಂಟೆಗಳ ಅವಧಿ**

ಪ್ರತಿಯೊಂದು ಪತ್ರಿಕೆಯ ಗರಿಷ್ಠ ಅಂಕಗಳು 150 ಆಗಿರುತ್ತದೆ ಮತ್ತು ಪ್ರತಿಯೊಂದು ಪತ್ರಿಕೆಯನ್ನು 2 ಘಂಟೆ ಸಮಯದಲ್ಲಿ ಉತ್ತರಿಸಬೇಕಾಗುತ್ತದೆ. ಈ ಎರಡು ಪತ್ರಿಕೆಗಳು "ವಸ್ತುನಿಷ್ಠ ಬಹು ಆಯ್ಕೆಯ" (Objective Multiple Choice Type) ವಿಧಾನದ್ದಾಗಿರುವುದು.

➡ <u>ಈ ಪತ್ರಿಕೆಗಳ ಪಠ್ಯಕ್ರಮ:–</u>

- ಸಾಮಾನ್ಯ ಜ್ಞಾನ ಪತ್ರಿಕೆಯು ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು ಮತ್ತು ಇದು ಭಾರತದ ಸಂವಿಧಾನ, ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಸಾಮಾನ್ಯ ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ಇತ್ತೀಚಿನ ಘಟನೆಗಳು, ದೈನಿಕ ಜೀವನದಲ್ಲಿ ವಿಜ್ಞಾನ ಮತ್ತು ಒಬ್ಬ ವಿದ್ಯಾವಂತ ವ್ಯಕ್ತಿಯು ದೈನಂದಿನ ಜೀವನದಲ್ಲಿ ಗಮನಿಸಬಹುದಾದಂತಹ ವಿಷಯಗಳು ಇವುಗಳ ಮೇಲಿನ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
- ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷಿನ ಪತ್ರಿಕೆಯು ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ವಿದ್ಯಾರ್ಥಿಗೆ ಇರಬೇಕಾದ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು. ಇದರ ಮೂಲಕ ಅಭ್ಯರ್ಥಿಯ ಕನ್ನಡ ಮತ್ತು ಇಂಗ್ಲೀಷ್ ವ್ಯಾಕರಣ ಶಬ್ದ ಸಂಪತ್ತು, ಕಾಗುಣಿತ (Spelling) ಸಮನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು ಇವುಗಳ ಪರಿಜ್ಞಾನ, ಇಂಗ್ಲೀಷ್/ಕನ್ನಡ ಭಾಷೆಯನ್ನು ಅರಿಯುವ ಮತ್ತು ಗ್ರಹಿಸುವ ಅಭ್ಯರ್ಥಿಯ ಶಕ್ತಿಯ ಮತ್ತು ಅದರ ಸರಿಯಾದ ಹಾಗೂ ತಪ್ಪು ಬಳಕೆ ಇತ್ಯಾದಿಗಳನ್ನು ಪರಿಶೀಲಿಸುವ ಅಭ್ಯರ್ಥಿಯ ಸಾಮರ್ಥ್ಯ ಇವುಗಳನ್ನು ಪರೀಕ್ಷಿಸಲು ಉದ್ದೇಶಿಸಲಾಗಿದೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಪತ್ರಿಕೆಗಳಲ್ಲಿ ಯಾವುದಾದರೂ ಒಂದಕ್ಕೆ ಉತ್ತರಿಸಬಹುದು.

**14. <u>ದೈಹಿಕ ಅರ್ಹತಾ ಪರೀಕ್ಷೆ:–</u>**

**ಅಬಕಾರಿ ಉಪನಿರೀಕ್ಷಕರು/ಅಬಕಾರಿ ರಕ್ಷಕ (ಪುರುಷ)ರು ಮತ್ತು ಅಬಕಾರಿ ರಕ್ಷಕರು(ಮಹಿಳೆ) ಹುದ್ದೆಗಳ ಅಭ್ಯರ್ಥಿಗಳ ದೈಹಿಕ ಅರ್ಹತೆ, ದಾರ್ಢ್ಯತೆ ಮತ್ತು ಸಾಮರ್ಥ್ಯದ ಬಗ್ಗೆ ಈ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.**

| ಕ್ರ.ಸಂ. | ಪುರುಷ | | | ಮಹಿಳೆ / ಮಾಜಿ ಸೈನಿಕ | |
|---|---|---|---|---|---|
| | ಅಂಶ (item) | ಅರ್ಹತಾ ಸಮಯ/ದೂರ | | ಅಂಶ (item) | ಅರ್ಹತಾ ಸಮಯ/ದೂರ |
| 1. | 100 ಮೀ. ಓಟ | 15 ಸೆಕೆಂಡುಗಳು | | 100 ಮೀ. ಓಟ | 18.5 ಸೆಕೆಂಡುಗಳು |
| 2. | ಎತ್ತರ ಜಿಗಿತ | 1.20 ಮೀಟರ್ | | ಎತ್ತರ ಜಿಗಿತ | 0.9 ಮೀಟರ್ |
| 3. | ಉದ್ದ ಜಿಗಿತ | 3.80 ಮೀಟರ್ | | ಉದ್ದ ಜಿಗಿತ | 2.50 ಮೀಟರ್ |
| 4. | ಗುಂಡಸೆತ(7.26 ಕೆ.ಜಿ) | 5.60 ಮೀಟರ್ | | ಗುಂಡೆಸೆತ (4 ಕೆ.ಜಿ) | 3.75 ಮೀಟರ್ |
| 5. | 800 ಮೀಟರ್ ಓಟ | 2 ನಿಮಿಷ 50 ಸೆಕೆಂಡುಗಳು | | 200 ಮೀಟರ್ ಓಟ | 40 ಸೆಕೆಂಡುಗಳು |

➡ ಅಭ್ಯರ್ಥಿಗಳು ಮೇಲಿನ 5 ದೈಹಿಕ ಸಾಮರ್ಥ್ಯಗಳ ಪೈಕಿ 3 ರಲ್ಲಿ ಉತ್ತೀರ್ಣರಾಗಬೇಕು.

- ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತಾದಾಯಕ ಪರೀಕ್ಷೆಯಾಗಿರುತ್ತದೆ.
- ಆಯೋಗವು ಈ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನೇತೃತ್ವಗೊಂಡ ಸಮಿತಿಯು ನಡೆಸುವುದು. ಈ ಸಮಿತಿಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಜಿಲ್ಲಾ ಯುವಜನ ಸೇವಾ ಅಧಿಕಾರಿಗಳು ಸದಸ್ಯರಾಗಿರುತ್ತಾರೆ ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಅಬಕಾರಿ) ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ

**ಪ್ರಮುಖ ಸೂಚನೆಗಳು:**

**15. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:**

ಜಾತಿ ಮೀಸಲಾತಿ ಕೋರಬಯಸುವ

- ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ
- ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ
- 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವು, ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ನಂತರ ಪಡೆದ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

**16. ಗ್ರಾಮೀಣ ಅಭ್ಯರ್ಥಿ:**

- ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಈ ಪ್ರಮಾಣ ಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾಗಿದ್ದು, ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
- ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟು ಕೊಂಡಿರತಕ್ಕದ್ದು.
- ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2 ರ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ–1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದಿರತಕ್ಕದ್ದು.
- ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

**ಸೂಚನೆ:** ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ–2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

**16.1. ಕನ್ನಡ ಮಾಧ್ಯಮ ಅಭ್ಯರ್ಥಿ :**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿರಬೇಕು.

**16.2 ಯೋಜನಾ ನಿರಾಶ್ರಿತ ಅಭ್ಯರ್ಥಿ :**

ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

**ಸೂಚನೆ: 1) ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು.**

2) ಈ ಮೇಲೆ ನಮೂದಿಸಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

**17. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:–**

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ–1 | ಪ್ರವರ್ಗ–1 | Cat – 1 | Category – I |
| 2ಎ | ಪ್ರವರ್ಗ–2ಎ | 2A | Category – 2A |
| 2ಬಿ | ಪ್ರವರ್ಗ–2ಬಿ | 2B | Category – 2B |
| 3ಎ | ಪ್ರವರ್ಗ–3ಎ | 3A | Category – 3A |
| 3ಬಿ | ಪ್ರವರ್ಗ–3ಬಿ | 3B | Category – 3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Reservation |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Student |
| ಯೋ.ಅ | ಯೋಜನಾ ನಿರಾಶ್ರಿತ ಅಭ್ಯರ್ಥಿ | PDP | Project Displaced Person |

ಅಭ್ಯರ್ಥಿಗಳು ತಮ್ಮ ON LINE ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅರ್ಹರೆ ಎಂಬುದನ್ನು ಆಯೋಗವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳನ್ನು ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗೆ ಪರಿಗಣಿಸಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಪರೀಕ್ಷಾ ಕೇಂದ್ರ ಹಾಗೂ ವಯೋಮಿತಿ ಸಡಿಲಿಕೆ, ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆಯನ್ನು ಪುರಸ್ಕರಿಸಲಾಗುವುದಿಲ್ಲ.

**18. ಆಯೋಗದೊಡನೆ ಪತ್ರ ವ್ಯವಹಾರ:**

ಆಯೋಗವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಪರೀಕ್ಷೆಗಾಗಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವಲ್ಲಿ ಸಮಸ್ಯೆ ಉಂಟಾದಲ್ಲಿ, ಸಹಾಯವಾಣಿ (HELP LINE) **9740977411 ಮತ್ತು 9741966115** ಸಂಪರ್ಕಿಸತಕ್ಕದ್ದು. ಅಭ್ಯರ್ಥಿಯು ಮಾಹಿತಿಗಾಗಿ ಸಂಪರ್ಕಿಸುವ ಸಮಯದಲ್ಲಿ ಈ ಹುದ್ದೆಗಳಿಗೆ ಸಲ್ಲಿಸಿದ ಅರ್ಜಿಯ ಕ್ರಮಸಂಖ್ಯೆ, ಜನ್ಮ ದಿನಾಂಕ, ಕೋರಿದ ಪರೀಕ್ಷಾ ಕೇಂದ್ರ ಇತ್ಯಾದಿ ವಿವರಗಳನ್ನು ನೀಡತಕ್ಕದ್ದು.

**19. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:**

| | | |
|---|---|---|
| ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ | : | 080–30574957 / 30574901 |
| ಪ್ರಾಂತೀಯ ಕಛೇರಿ ಮೈಸೂರು | : | 0821–2545956 |
| ಪ್ರಾಂತೀಯ ಕಛೇರಿ ಬೆಳಗಾವಿ | : | 0831–2475345 |
| ಪ್ರಾಂತೀಯ ಕಛೇರಿ ಗುಲ್ಬರ್ಗಾ | : | 08472–227944 |
| ಪ್ರಾಂತೀಯ ಕಛೇರಿ ಶಿವಮೊಗ್ಗ | : | 08182–228099 |
| ಸಹಾಯವಾಣಿ | : | **9740977411**<br>**9741966115** |

**20. ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯೋಗದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

ಸಹಿ/–
(ಕೆ.ಆರ್. ಸುಂದರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

## **ಅನುಬಂಧ–1**

**(ಅ) ಅಬಕಾರಿ ಉಪನಿರೀಕ್ಷಕರು–200 ಹುದ್ದೆಗಳ ವರ್ಗೀಕರಣ:**

| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಕ.ಮಾ.ಅ | ಯೋ.ಅ | ಒಟ್ಟು. |
|---|---|---|---|---|---|---|---|
| ಪ.ಜಾ. | 08 | 09 | 07 | 03 | 01 | 02 | 30 |
| ಪ.ಪಂ. | – | 02 | 02 | – | 01 | 01 | 06 |
| ಪ್ರವರ್ಗ–1 | 02 | 03 | 01 | 01 | – | 01 | 08 |
| ಪ್ರವರ್ಗ–2(ಎ) | 08 | 09 | 07 | 03 | 01 | 02 | 30 |
| ಪ್ರವರ್ಗ–2(ಬಿ) | 02 | 03 | 01 | 01 | – | 01 | 08 |
| ಪ್ರವರ್ಗ–3(ಎ) | 02 | 03 | 01 | 01 | – | 01 | 08 |
| ಪ್ರವರ್ಗ–3(ಬಿ) | 04 | 03 | 02 | 01 | – | – | 10 |
| ಸಾ.ಅ. | 25 | 30 | 25 | 10 | 05 | 05 | 100 |
| ಒಟ್ಟು | 51 | 62 | 46 | 20 | 08 | 13 | 200 |

ಸಹಿ/–
(ಕೆ.ಆರ್. ಸುಂದರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

# ಅನುಬಂಧ-2

## ಅಬಕಾರಿ ರಕ್ಷಕರ (ಪುರುಷ) ನೇರ ನೇಮಕಾತಿ:-ಹುದ್ದೆಗಳ ವರ್ಗೀಕರಣ

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 1. | ಬೆಂಗಳೂರು ನಗರ | 106 | ಪ.ಜಾ | 09 | 04 | 01 | 01 | 01 | 16 |
| | | | ಪ.ಪಂ | 02 | 01 | - | - | - | 03 |
| | | | ಪ-1 | 03 | 01 | - | - | - | 04 |
| | | | ಪ-2(ಎ) | 09 | 04 | 01 | 01 | 01 | 16 |
| | | | ಪ-2(ಬಿ) | 03 | 01 | - | - | - | 04 |
| | | | ಪ-3(ಎ) | 02 | 02 | - | - | - | 04 |
| | | | ಪ-3(ಬಿ) | 04 | 02 | - | - | - | 06 |
| | | | ಸಾ.ಅ | 29 | 13 | 05 | 03 | 03 | 53 |
| | | | **ಒಟ್ಟು** | **61** | **28** | **07** | **05** | **05** | **106** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 2. | ಬೆಂಗಳೂರು ಗ್ರಾಮಾಂತರ | 13 | ಪ.ಜಾ | 2 | - | - | - | - | 2 |
| | | | ಪ.ಪಂ | - | - | - | - | - | 0 |
| | | | ಪ-1 | - | - | - | - | - | 0 |
| | | | ಪ-2(ಎ) | 1 | 1 | - | - | - | 2 |
| | | | ಪ-2(ಬಿ) | - | - | - | - | - | 0 |
| | | | ಪ-3(ಎ) | 1 | - | - | - | - | 1 |
| | | | ಪ-3(ಬಿ) | 1 | - | - | - | - | 1 |
| | | | ಸಾ.ಅ | 3 | 2 | 1 | 1 | - | 7 |
| | | | **ಒಟ್ಟು** | **8** | **3** | **1** | **1** | **-** | **13** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 3. | ಬಾಗಲಕೋಟೆ | 2 | ಪ.ಜಾ | - | - | - | - | - | - |
| | | | ಪ.ಪಂ | - | - | - | - | - | - |
| | | | ಪ-1 | - | - | - | -- | - | - |
| | | | ಪ-2(ಎ) | 1 | - | - | - | - | 01 |
| | | | ಪ-2(ಬಿ) | - | - | - | - | - | - |
| | | | ಪ-3(ಎ) | - | - | - | - | - | - |
| | | | ಪ-3(ಬಿ) | - | - | - | - | - | - |
| | | | ಸಾ.ಅ | 1 | - | - | - | - | 01 |
| | | | **ಒಟ್ಟು** | **02** | **-** | **-** | **-** | **-** | **02** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 4. | ಬೆಳಗಾಂ | 21 | ಪ.ಜಾ | 2 | 1 | - | - | - | 3 |
| | | | ಪ.ಪಂ | 1 | - | - | - | - | 1 |
| | | | ಪ-1 | 1 | - | - | - | - | 1 |
| | | | ಪ-2(ಎ) | 2 | 1 | - | - | - | 3 |
| | | | ಪ-2(ಬಿ) | 1 | - | - | - | - | 1 |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| | | | ಪ-3(ಎ) | 1 | - | - | - | - | 1 |
| | | | ಪ-3(ಬಿ) | 1 | - | - | - | - | 1 |
| | | | ಸಾ.ಅ | 6 | 2 | 1 | - | 1 | 10 |
| | | | **ಒಟ್ಟು** | **15** | **4** | **1** | - | **1** | **21** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 5. | ಬಳ್ಳಾರಿ | 9 | ಪ.ಜಾ | 1 | - | - | - | - | 1 |
| | | | ಪ.ಪಂ | 1 | - | - | - | - | 1 |
| | | | ಪ-1 | 1 | - | - | - | - | 1 |
| | | | ಪ-2(ಎ) | 1 | - | - | - | - | 1 |
| | | | ಪ-2(ಬಿ) | 1 | - | - | - | - | 1 |
| | | | ಪ-3(ಎ) | - | - | - | - | - | - |
| | | | ಪ-3(ಬಿ) | - | - | - | - | - | - |
| | | | ಸಾ.ಅ | 3 | 1 | - | - | - | 4 |
| | | | **ಒಟ್ಟು** | **8** | **1** | - | - | - | **9** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 6. | ಬೀದರ್ | 7 | ಪ.ಜಾ | 1 | - | - | - | - | 1 |
| | | | ಪ.ಪಂ | - | - | - | - | - | - |
| | | | ಪ-1 | - | - | - | - | - | - |
| | | | ಪ-2(ಎ) | 1 | - | - | - | - | 1 |
| | | | ಪ-2(ಬಿ) | 1 | - | - | - | - | 1 |
| | | | ಪ-3(ಎ) | - | - | - | - | - | - |
| | | | ಪ-3(ಬಿ) | - | - | - | - | - | - |
| | | | ಸಾ.ಅ | 2 | 2 | - | - | - | 4 |
| | | | **ಒಟ್ಟು** | **05** | **02** | - | - | - | **7** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 7. | ಬಿಜಾಪುರ | 3 | ಪ.ಜಾ | - | - | - | - | - | - |
| | | | ಪ.ಪಂ | - | - | - | - | - | - |
| | | | ಪ-1 | 1 | - | - | - | - | 1 |
| | | | ಪ-2(ಎ) | - | - | - | - | - | - |
| | | | ಪ-2(ಬಿ) | - | - | - | - | - | - |
| | | | ಪ-3(ಎ) | - | - | - | - | - | - |
| | | | ಪ-3(ಬಿ) | - | - | - | - | - | - |
| | | | ಸಾ.ಅ | 1 | 1 | - | - | - | 2 |
| | | | **ಒಟ್ಟು** | **2** | **1** | - | - | - | **3** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 8. | ಚಾಮರಾಜನಗರ | 3 | ಪ.ಜಾ | 1 | - | - | - | - | 1 |
| | | | ಪ.ಪಂ | - | - | - | - | - | - |
| | | | ಪ-1 | - | - | - | - | - | - |
| | | | ಪ-2(ಎ) | - | - | - | - | - | - |
| | | | ಪ-2(ಬಿ) | - | - | - | - | - | - |

| | | | ಪ–3(ಎ) | – | – | – | – | – | – |
|---|---|---|---|---|---|---|---|---|---|
| | | | ಪ–3(ಬಿ) | – | – | – | – | – | – |
| | | | ಸಾ.ಅ | 2 | – | – | – | – | 2 |
| | | | **ಒಟ್ಟು** | **3** | – | – | – | – | **3** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 9. | ಚಿಕ್ಕಬಳ್ಳಾಪುರ | 9 | ಪ.ಜಾ | – | 1 | – | – | – | **1** |
| | | | ಪ.ಪಂ | – | – | – | – | – | – |
| | | | ಪ–1 | – | – | – | – | – | – |
| | | | ಪ–2(ಎ) | 1 | 1 | – | – | – | **2** |
| | | | ಪ–2(ಬಿ) | – | – | – | – | – | – |
| | | | ಪ–3(ಎ) | 1 | – | – | – | – | **1** |
| | | | ಪ–3(ಬಿ) | 1 | – | – | – | – | **1** |
| | | | ಸಾ.ಅ | 2 | 1 | 1 | | | 4 |
| | | | **ಒಟ್ಟು** | **5** | **3** | 1 | | | **9** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 10. | ಚಿಕ್ಕಮಗಳೂರು | 13 | ಪ.ಜಾ | 1 | 1 | – | – | – | 2 |
| | | | ಪ.ಪಂ | – | – | – | – | – | – |
| | | | ಪ–1 | 1 | – | – | – | – | 1 |
| | | | ಪ–2(ಎ) | 2 | – | – | – | – | 2 |
| | | | ಪ–2(ಬಿ) | 1 | – | – | – | – | 1 |
| | | | ಪ–3(ಎ) | 1 | – | – | – | – | 1 |
| | | | ಪ–3(ಬಿ) | – | – | – | – | – | – |
| | | | ಸಾ.ಅ | 4 | 2 | – | – | – | 6 |
| | | | **ಒಟ್ಟು** | **10** | **3** | – | – | – | **13** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 11. | **ಚಿತ್ರದುರ್ಗ** | 9 | ಪ.ಜಾ | – | 01 | – | – | – | 01 |
| | | | ಪ.ಪಂ | – | – | – | – | – | – |
| | | | ಪ–1 | – | – | – | – | – | – |
| | | | ಪ–2(ಎ) | 01 | – | – | – | – | 01 |
| | | | ಪ–2(ಬಿ) | 01 | – | – | – | – | 01 |
| | | | ಪ–3(ಎ) | 01 | – | – | – | – | 01 |
| | | | ಪ–3(ಬಿ) | – | – | – | – | – | – |
| | | | ಸಾ.ಅ | 03 | 02 | – | – | – | 05 |
| | | | **ಒಟ್ಟು** | **06** | **03** | – | – | – | **09** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 12. | **ದಕ್ಷಿಣ ಕನ್ನಡ** | 14 | ಪ.ಜಾ | 1 | 1 | – | – | – | 2 |
| | | | ಪ.ಪಂ | – | – | – | – | – | – |
| | | | ಪ–1 | – | – | – | – | – | – |
| | | | ಪ–2(ಎ) | 2 | – | – | – | – | 2 |
| | | | ಪ–2(ಬಿ) | 1 | – | – | – | – | 1 |

| | | | | | | | | | |
|---|---|---|---|---|---|---|---|---|---|
| | | | ಪ-3(ಎ) | 1 | - | - | - | - | 1 |
| | | | ಪ-3(ಬಿ) | 1 | - | - | - | - | 1 |
| | | | ಸಾ.ಅ | 4 | 2 | 1 | - | - | 7 |
